


ಭರ್ತಿ ಬಂದ ಜನಕ್ಕೆ ಹಂಚಿಕೆ. ಇದರ ಜೊತೆ ಹನುಮನಿಗೆ ವಡೆ ಹಾರ ಹಾಕಿ ಅವನ ಅನುಗ್ರಹ ಬಯಸುವವರ ಸಂಖ್ಯೆಯೂ ಸಾಕಷ್ಟು ದೊಡ್ಡದಾಗಿರುತ್ತದೆ. ಪನಿವಾರದ ಜೊತೆ ಈ ಹಾರದ ವಡೆಗಳೂ ಕಣ್ಣಂದಾಜಿನ ಮೇಲೆ ಜನರ ಸಂಖ್ಯೆ ನೋಡಿಕೊಂಡು ಒಂದಿಡೀ ಅಥವಾ ಅರ್ಧ ಹಂಚಲ್ಪಡುತ್ತವೆ. ಪ್ರಸಾದದ ಸರತಿಯ ಸಾಲಿನಲ್ಲಿ ಮುಂದೆ ನಿಲ್ಲಲು ಹಾತೊರೆಯುತ್ತಾ ಮಕ್ಕಳು ದೊಡ್ಡವರಿಂದ ಬೈಸಿಕೊಳ್ಳುತ್ತವೆ. ಹೀಗೆ ಅತ್ತ ಹಳ್ಳಿಗೆ ಹಳ್ಳಿಯೂ ಅಲ್ಲದೆ, ಪೇಟೆಗೆ ಪೇಟೆಯೂ ಅಲ್ಲದೆ, ನಡುವಿನ ಸ್ಥಾನದಲ್ಲಿ ನಿಲ್ಲುವ ದಿಬ್ಬೂರು ಎಂಬ ಊರಿನಲ್ಲಿ ಶನಿವಾರ ಅಂದರೆ ಒಂದು ಸಂಚಲನ. ನಿದ್ರಿಸುತ್ತಿರುವಂತೆ ಕಾಣುವ ಊರು ಮುಸ್ಸಂಜೆಯಿಂದ ರಾತ್ರಿ ಎಂಟರವರೆಗೆ ಮೈ